**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸಿಜೆಎಂ, ರಾಯಚೂರು**
**ಸಿ.ಸಿ.ನಂಬರು.1765/2018**

**CW-1 / PW-1**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಜಿನ್ ಚಂದ್ |
| ತಂದೆಃ ಹೆಸರು | ಃ | ವಿಮಲರಾಜ್ |
| ವಯಸ್ಸು | ಃ | 38 |
| ಉದ್ಯೋಗ | ಃ | ಖಾಸಗಿ ಕೆಲಸ |
| ವಿಳಾಸ | ಃ | ರಾಯಚೂರು |

**ಮುಖ್ಯ ವಿಚಾರಣೆ ಅಬಿಯೋಜನೆ ಪರ ಮಾನ್ಯ ಹಿರಿಯ ಸ.ಸ.ಅ.ಅವರಿಂದ**

**ಕಲಂ 299 ಸಿ.ಆರ್.ಪಿ.ಸಿ ಅಡಿಯಲ್ಲಿ ಸಾಕ್ಷಿ ವಿಚಾರಣೆ**

**ಪ್ರಮಾಣೀಕರಿಸಿದ ದಿನಾಂಕಃ 26-07-2024**

ಸೆಪ್ಟೆಂಬರ್ 2010 ರಲ್ಲಿ 1 ನೇ ಆರೋಪಿ ನಮ್ಮ ಅಂಗಡಿಗೆ ಬಂದು ಎಲ್ಕ್ಟೀಕಲ್ ವೈರಗಳು ಬೇಕಾಗಿವೆ ರಿಮ್ಸ ಅಲ್ಲಿ ಕೆಲಸ ನಡೆಯುತ್ತಿದ್ದೆ ನಾವು ಕಂಟ್ರಾಕ್ಟರ ಇದೆವೆ ಎಂದು ಹೇಳಿ ನಮ್ಮ ಬಳಿ ಸಾಮಾಗ್ರಿಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ಎಲ್ಲ ಆರೋಪಿತರು ಇದ್ದರು. 1) 1 ಎಂ.ಎಂ. ಕಾಪರ್ ವೈರ್ 2) 2.5 ಎಂ.ಎಂ ಕಾಪರ್ ವೈರ್ 3) 4 ಎಂ.ಎಂ. ಕಾಪರ್ಷ ವೈರ್ ತೆಗೆದುಕೊಂಡು ಒಟ್ಟು ಹಣ ರೂ.49,380/- ಆಗಿದ್ದು ಅದರ ಬದಲಿಗೆ ರಾಯಚೂರು ಸಿಡಿಕೆಂಟ್ ಬ್ಯಾಂಕಿನ ಚಕ್ ನಿಡಿರುತ್ತಾರೆ. ಸದರಿಯವರ ಖಾತೆಯಲ್ಲಿ ಹಣ ಇರುವುದಿಲ್ಲ ಎಂದು ತಿಳಿದು ಬಂದಿರುತ್ತದೆ. ಸದರಿಯವರು ನಮಗೆ ಬೋಗಸ್ ಚಕ್ ನೀಡಿ ಮೋಸ ಮಾಡಿದ್ದು ಕಂಡು ಬಂದಿರುತ್ತದೆ. ದಿನಾಂಕ 01.10.2010 ರಂದು ಈ ಬಗ್ಗೆ ಪೋಲಿಸರಿಗೆ ದೂರನ್ನು ನೀಡಿರುತ್ತೇನೆ. ಸಾಕ್ಷಿದಾರರು ಗುರುತಿಸಿದ ದೂರನ್ನು ನಿಪಿ-1 ಎಂದು ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ನಾವು ಆರೋಪಿತರಿಗೆ ಕೊಟ್ಟ ಟ್ಯಾಕ್ಸ ಇನ್ವಾಯಿಸನ್ನು ನಿಪಿ-2 ಎಂದು, ಆರೋಪಿತರು ಕೊಟ್ಟ ಚಕ್ಕನ್ನು ನಿಪಿ-3 ಎಂದು ಗುರುತಿಸಲಾಯಿತು. ನಾನು ದೂರು ನೀಡಿದ ನಂತರ ಪೋಲಿಸರು ಬಂದು ಗುನ್ನೆ ಸ್ಥಳ ಪಂಚನಾಮೆಯನ್ನು ಮಾಡಿರುತ್ತಾರೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಸಹಿಯನ್ನು ನಿಪಿ-4 ಎ ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಉಕ್ತಲೇಖನ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿಕೊಂಡಿರುತ್ತಾರೆ.)**

**ಪ್ರಧಾನ ಹಿರಿಯ ಸಿ.ಜೆ ಮತ್ತು ಸಿಜೆಎಂ,**
**ರಾಯಚೂರು.**